

‘ಗೆಜ್ಜೆಪೂಜೆ’, ‘ಫಣಿಯಮ್ಮ’ ಕಾದಂಬರಿಗಳ ಖ್ಯಾತಿಯ ಎಂ.ಕೆ. ಇಂದಿರಾ ಕನ್ನಡಿಗರು ಎಂದೂ ಮರೆಯಬಾರದ ಕಾದಂಬರಿಗಾರ್ತಿ. ಜನವರಿ 5 ಅವರ ಹುಟ್ಟುಹಬ್ಬ.

■ ಮಹತಿ

05.01.1917 – 15.03.1994

# ಎಂ.ಕೆ.ಇಂದಿರಾ

# ಅಂದಿಗೂ ಇಂದಿಗೂ ಎಂದಿಗೂ

ಓದಿದ್ದು ಮಿಡ್ಲ್ ಸ್ಕೂಲ್‌ವರೆಗೆ. ಹನ್ನೆರಡಕ್ಕೆ ಮದುವೆ. ಹದಿನೆಂಟಕ್ಕೆ ಮೊದಲ ಮಗು. ರಚಿಸಿದ್ದು ಅರವತ್ತಕ್ಕೂ ಹೆಚ್ಚು ಕೃತಿ!

ಕನ್ನಡ ಸಾಹಿತ್ಯಲೋಕ ಕಂಡ ಅಪೂರ್ವ ಬರಹಗಾರ್ತಿ ಎಂ.ಕೆ. ಇಂದಿರಾ ಅವರನ್ನು ನಾಲ್ಕೇ ಸಾಲುಗಳಲ್ಲಿ ಮೇಲಿನಂತೆ ಚಿತ್ರಿಸಬಹುದು. ಇಂದಿರಾ (ಮಂಡಗದ್ದೆ ಕೃಷ್ಣರಾವ್ ಇಂದಿರಾ) ಅವರ ಹೆಸರು ಹೇಳಿದರೆ, ಓದಿನರುಚಿ ಬಲ್ಲ ಸಹೃದಯರು ಕಣ್ಣರಳಿಸಬಹುದು. ‘ಗೆಜ್ಜೆಪೂಜೆ’, ‘ಫಣಿಯಮ್ಮ’ ಹೆಸರುಗಳನ್ನು ಪ್ರಸ್ತಾಪಿಸಿದರೆ ಚಿತ್ರರಸಿಕರ ಹುಬ್ಬುಗಳೂ ಮೇಲೇರಿಯಾವು. ಪುಟ್ಟಣ್ಣ ಕಣಗಾಲರ ನಿರ್ದೇಶನದ ಮೂಲಕ ಗೆಜ್ಜೆಪೂಜೆ ಚಿತ್ರರಸಿಕರ ಮನೆಮನಗಳಲ್ಲಿ ಸದ್ದು ಮಾಡಿತು. ಪ್ರೇಮಾ ಕಾರಂತರ ಮೂಲಕ ಕನ್ನಡದ ಫಣಿಯಮ್ಮ ಅಂತರರಾಷ್ಟ್ರೀಯ ಮನ್ನಣೆಗೂ ಪಾತ್ರಳಾದಳು.

ಜನಪ್ರಿಯ ಕಾದಂಬರಿಗಾರ್ತಿ ಎಂದಷ್ಟೇ ಹೇಳಿದರೆ, ಇಂದಿರಾ ಅವರ ಬರವಣಿಗೆಗೆ ಪೂರ್ಣ ನ್ಯಾಯ ಸಲ್ಲಿಸಿದಂತಾಗುವುದಿಲ್ಲ. ಅವರು ಜನಪ್ರಿಯ ಮಾತ್ರವಲ್ಲ, ಜನಪರ ಬರಹಗಾರ್ತಿಯೂ ಹೌದು. ಜನಪ್ರಿಯತೆ ಮತ್ತು ಜನಪರತೆ ಜೊತೆ ಜೊತೆಯಾಗಿ ನಡೆದ ಅಪರೂಪದ ಉದಾಹರಣೆ ಅವರದು. ‘ಗೆಜ್ಜೆಪೂಜೆ’, ‘ಸದಾನಂದ’, ‘ನವರತ್ನ’ ಕಾದಂಬರಿಗಳು ಭಾವುಕತೆಯನ್ನಷ್ಟೇ ನೆಚ್ಚಿದ ಕಥನಗಳಲ್ಲ. ಅವು ಸ್ತ್ರೀಲೋಕದ ತವಕತಲ್ಲಣಗಳ ಚಿತ್ರಣವಾಗಿರುವುದರ ಜೊತೆಗೆ, ಒಂದು ಕಾಲಘಟ್ಟದ ಸಾಮಾಜಿಕ ವಿಶ್ಲೇಷಣೆಗಳೂ ಹೌದು. ‘ಫಣಿಯಮ್ಮ’ ಕಾದಂಬರಿ ಕನ್ನಡದ ಅಪೂರ್ವ ಕಾದಂಬರಿಗಳಲ್ಲೊಂದು. ಎಳೆಯ ವಯಸ್ಸಿನಲ್ಲಿ ಗಂಡನನ್ನು